3. ರೈತರ ಈ ಸಮಸ್ಯೆಯು ಸರ್ಕಾರದ ಮುಂದೆ ಬಂದಿದ್ದು, ಹೊಸದಾಗಿ ತಂದಿರುವ ಆಮದು ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಕೇಂದ್ರಸರ್ಕಾರಕ್ಕೆ ಕೋರಲಾಗಿದೆ.

ರೇಷ್ಮೆ ಬೆಳೆಗಾರರ ಸಂಖ್ಯೆ ಇಳಿಮುಖವಾಗುತ್ತಿರುವದು.

1106(1633)

ಶ್ರೀ.ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ರೇಷ್ಮೆ ಬೆಳೆಗಾರರ ಸಂಖ್ಯೆ ಕಡಿಮೆಯಾಗುತ್ತಿರುವುದು ನಿಜವೇ. (ಕಳೆದ ಮೂರು ವರ್ಷಗಳ ಬೆಳೆಗಾರರ ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಸಮಸ್ಯೆಯ ಪರಿಹಾರಕ್ಕೆ ರಾಜ್ಯ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು):

ಅ) ಹೌದು.

ಕಳೆದ ಮೂರು ವರ್ಷಗಳಿಂದ ರೇಷ್ಮೆ ಬೆಳೆಗಾರರ ಸಂಖ್ಯೆ ಕೆಳಕಂಡಂತಿದೆ.

ವರ್ಷ	ರೇಷ್ಮೆ ಬೆಳೆಗಾರರ ಸಂಖ್ಯೆ			
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರೆ	ಒಟ್ಟು
1995 - 96	40,338	8484	2,84,518	3,33,340
1996 - 97	38,850	7940	2,65,502	3,12,292
1997- 98	35,467	9760	2,56,283	3,01,510

ಆ) 1) ಮಳೆ ಆಶ್ರಯದಲ್ಲಿದ್ದ ಹಿಪ್ಪುನೇರಳೆ ಪ್ರದೇಶ ಕಡಿಮೆ ಆಗಿರುವುದು.

2) ಇತರೆ ವಾಣಿಜ್ಯ ಬೆಳೆಗಳ ಪೈಪೋಟಿ.

3) ಗೂಡಿನ ಹಾಗೂ ರೇಷ್ಮೆಯ ಬೆಲೆ ಕುಂಠಿತಗೊಳ್ಳುತ್ತಿರುವುದು.

ಇ) 1) ಗೂಡಿನ ಹಾಗೂ ರೇಷ್ಮೆ ಬೆಲೆಯನ್ನು ಸ್ಥಿರೀಕರಣ ಗೊಳಿಸುವುದು.

2) ಹೊಸ ತಾಂತ್ರಿಕತೆಗಳನ್ನು ರೈತರಿಗೆ ಮನನ ಮಾಡಿ ಕೊಟ್ಟು ಗೂಡಿನ ಹಾಗೂ ರೇಷ್ಮೆಯ ಇಳುವರಿ ಮತ್ತು ಉತ್ಪಾದನೆ ಹೆಚ್ಚಿಸುವುದು.

3) ರೇಷ್ಮೆ ಬೆಳೆಗಾರರಿಗೆ ಪ್ರತ್ಯೇಕವಾದ ಹುಳು ಸಾಕಾಣಿಕೆ ಮನೆಗಳ ನಿರ್ಮಾಣಕ್ಕೆ ನಬಾರ್ಡ್ ಮುಖಾಂತರ ಸಾಲವನ್ನು ನೀಡುವುದು.

4) ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೆಟಾಲಿಟಿಕ್ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಹನಿ ನೀರಾವರಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವುದು.

Regarding Cocoon Markets in Mysore Seed Area.

1107 (1634)

Sri. S.P. Muddahanume Gowda (Kunigal): Will the Minister of Stae for Sericulture be pleased to state

a) Whether it has come to the Notice of Government that the existence of middlemen in the markets of Mysore Seed area is causing problem in getting fair price to the Seed Rearers.

b) If so, what measures are being taken by the Govermnent to eradi cate such problem.

Sri.D.NAGARAJAIAH (Minister of state for sericulture.):

a) -No-

b) Does not arise

ಕುಣಿಗಲ್ ಪಟ್ಟಣವನ್ನು ಐಡಿಎಸ್ಎಂಟಿ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸುವುದು

1108(1635)

ಶ್ರೀ. ಎಸ್.ಪಿ. ಮುದ್ದು ಹನುಮೇಗೌಡ (ಕುಣಿಗಲ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ಇದುವರೆಗೆ ಐಡಿಎಸ್ಎಂಟಿ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಲಾದ ಪಟ್ಟಣಗಳ ಸಂಖ್ಯೆ ಎಷ್ಟು?
2. ಕುಣಿಕಲ್ ಪಟ್ಟಣವನ್ನು ಈ ಯೋಜನೆಯಡಿ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೆ?
3. ಹಾಗಿದ್ದಲ್ಲಿ ಎಂದಿನಿಂದ ಈ ಯೋಜನೆಯನ್ನು ಕೈಗೊಳ್ಳಲಾಗುವುದು?

ಶ್ರೀ ಮಿರಾಜುದ್ದಿನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.):

1. 77ಪಟ್ಟಣಗಳು
2. ಇಲ್ಲ
3. ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು

1110 (1642)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ಕಳೆದ 3ವರ್ಷಗಳಿಂದ ರಾಜ್ಯದಲ್ಲಿರುವ ಪ್ರಾಥಮಿಕ ಪ್ರೌಢಶಾಲೆಗಳಲ್ಲಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

(ಆ) ವಿದ್ಯಾರ್ಥಿವೇತನ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?